# ಪ್ರಧಾನಿಯೆಂದರೆ ಹೀಗಿರಬೇಕು!



■ ಪ್ರವೀಣ ಕುಲಕರ್ಣಿ

ಕೋವಿಡ್ ಹರಡಲು ಕಾರಣವಾಗುವ ಓಮೈಕ್ರಾನ್‌ನ ಅಲೆ ಬಲವಾಗಿ ಬೀಸುತ್ತಿರುವಾಗ ನಮ್ಮ ರಾಜ್ಯದ ಕೆಲವು ಜನಪ್ರತಿನಿಧಿಗಳು ಸಾರ್ವಜನಿಕ ಆರೋಗ್ಯವನ್ನೇ ಪಣಕ್ಕಿಟ್ಟು ಹೊಣೆಗೇಡಿತನದಿಂದ ಜಾತ್ರೆ ಮಾಡಿದ್ದು, ಜನ್ಮದಿನ ಆಚರಿಸಿಕೊಂಡಿದ್ದು ಗೊತ್ತಿದೆ ತಾನೆ? ಆದರೆ, ಅದೇ ನ್ಯೂಜಿಲೆಂಡ್ ಪ್ರಧಾನಿ ಜಸಿಂಡಾ ಅರ್ಡರ್ನ್ ಅವರ ನಡೆ ನೋಡಿ. ಸೋಂಕಿನ ಪ್ರಮಾಣ ಹೆಚ್ಚಾಗುತ್ತಿದ್ದಂತೆಯೇ ತಮ್ಮ ಮದುವೆಯನ್ನೇ ಮುಂದೂಡಿ, ದೇಶದ ಜನಸಮುದಾಯಕ್ಕೆಲ್ಲ ಮಾದರಿಯಾದರು. ಸಂಕಷ್ಟದ ಸಂದರ್ಭದಲ್ಲಿ ಜನರೊಟ್ಟಿಗೆ ನಿಂತು ಧೈರ್ಯವನ್ನೂ ತುಂಬಿದರು.

ಹೆಚ್ಚಿನ ಅನಾಹುತ ಮಾಡದಂತೆ ಕೋವಿಡ್ ಅನ್ನು ಯಶಸ್ವಿಯಾಗಿ ತಡೆಗಟ್ಟಿದ ದೇಶಗಳಲ್ಲಿ ನ್ಯೂಜಿಲೆಂಡ್ ಕೂಡ ಒಂದು. ಕೊರೊನಾ ಸೋಂಕಿನಿಂದ ಆ ದೇಶದಲ್ಲಿ ಇದುವರೆಗೆ ಮರಣ ಹೊಂದಿದವರ ಸಂಖ್ಯೆ 25 ಮಾತ್ರ. ಸಂಕಷ್ಟದ ಸಮಯದಲ್ಲಿ ದೇಶಕ್ಕೆ ಸಮರ್ಥ ನಾಯಕತ್ವ ನೀಡಿದ ಜಸಿಂಡಾ, ತಮ್ಮ ಸಕಾಲಿಕ ಹಾಗೂ ಸಮರ್ಥ ನಿರ್ಧಾರಗಳಿಂದ ಜನ ಹೆಚ್ಚಿನ ಸಂಕಷ್ಟಕ್ಕೆ ಸಿಲುಕದಂತೆ ಪಾರು ಮಾಡಿದವರು. ಕೋವಿಡ್‌ನಿಂದ ದೇಶವನ್ನು ರಕ್ಷಿಸಿದ ಅವರಿಗೆ ಚುನಾವಣೆಯಲ್ಲಿ ಅಲ್ಲಿನ ಜನ ಅಭೂತಪೂರ್ವ ಗೆಲುವನ್ನು ಕಾಣಿಕೆಯಾಗಿ ಕೊಟ್ಟು, ಅವರನ್ನು ಮತ್ತೊಮ್ಮೆ ಪ್ರಧಾನಿ ಹುದ್ದೆಯಲ್ಲಿ ಕೂರಿಸಿದ್ದಾರೆ.

ದೇಶದಲ್ಲಿ ಓಮೈಕ್ರಾನ್ ಸೋಂಕಿನ ಹತ್ತು ಪ್ರಕರಣಗಳು ವರದಿಯಾಗುತ್ತಿದ್ದಂತೆ ಮತ್ತೆ ಕಠಿಣ ನಿರ್ಬಂಧ ಹೇರಲು ಅವರು ಒಂದಿನಿತೂ ಹಿಂದೆ ಮುಂದೆ ನೋಡಲಿಲ್ಲ. ಜನ ಗುಂಪುಗೂಡದಂತೆಯೂ ಅವರು ನಿರ್ಬಂಧ ವಿಧಿಸಿದರು. ‘ನಿಗದಿತ ದಿನಾಂಕದಂದು ನನ್ನ ಮದುವೆ ನಡೆಯುವುದಿಲ್ಲ. ಅದನ್ನು ಮುಂದಕ್ಕೆ ಹಾಕಿರುವೆ. ನನ್ನಂತೆ ಈ ರೀತಿ ಸಂದಿಗ್ಧಕ್ಕೆ ಸಿಲುಕಿದ ಎಲ್ಲರಲ್ಲೂ ನಾನು ಕ್ಷಮೆಯಾಚಿಸುವೆ. ಆದರೆ, ಇಂದಿನ ಸ್ಥಿತಿಯಲ್ಲಿ ಇಂತಹ ನಿರ್ಧಾರಗಳು ಅನಿವಾರ್ಯ’ ಎಂದು ಆಕೆ ಹೇಳಿದರು. ದೇಶವಾಸಿಗಳ ಅಪಾರ ಬೆಂಬಲವನ್ನೂ ಗಳಿಸಿದರು.

ಜಸಿಂಡಾ ಅವರಿಗೆ ಈಗಷ್ಟೇ 42ರ ಹರೆಯ. ಟಿ.ವಿ. ಕಾರ್ಯಕ್ರಮದ ನಿರೂಪಕ ಕ್ಲಾರ್ಕ್ ಗೇಫೋರ್ಡ್, ಅವರ ಬಹುಕಾಲದ ಬಾಯ್‌ಫ್ರೆಂಡ್. ಈ ಜೋಡಿಗೆ ಈಗಾಗಲೇ ಒಂದು ಹೆಣ್ಣುಮಗುವಿದೆ. ಮುಹೂರ್ತ ನಿಗದಿಯಾದ ಮೇಲೆ ಓಮೈಕ್ರಾನ್‌ನ ಅಲೆ ಎದ್ದಿದ್ದರಿಂದ ಮದುವೆ ಮುಂದಕ್ಕೆ ಹೋಗಿದೆ. ತಮ್ಮ ನಾಯಕತ್ವ ಗುಣದಿಂದ, ಹೊಸ ದೃಷ್ಟಿಕೋನದಿಂದ, ಯೋಚಿಸಿ ನಿರ್ಧಾರ ತೆಗೆದುಕೊಳ್ಳುತ್ತಿರುವ ಮನೋಭಾವದಿಂದ, ಮೌಲ್ಯಗಳಿಗೆ ಕೊಡುವ ಬೆಲೆಯಿಂದ, ತಜ್ಞರ ಮಾತಿಗೆ ಕಿವಿಗೊಡುವ ನಡೆಯಿಂದ, ಸಮಾಜದ ಸಾಮರಸ್ಯದ ಎಳೆಗಳನ್ನು ಗಟ್ಟಿಗೊಳಿಸಲು ನಡೆಸುತ್ತಿರುವ ಯತ್ನಗಳಿಂದ ತಾವೊಬ್ಬ ಅತ್ಯಂತ ಭಿನ್ನ ಪ್ರಧಾನಿ ಎಂಬುದನ್ನು ಜಗತ್ತಿಗೆ ತೋರಿಸಿಕೊಟ್ಟವರು ಆಕೆ.

ನ್ಯೂಜಿಲೆಂಡ್‌ನಲ್ಲಿ ಹಲವು ಸಾಮಾಜಿಕ ಭದ್ರತಾ ಕಾರ್ಯಕ್ರಮಗಳನ್ನು ಜಾರಿಗೊಳಿಸಿದ ಶ್ರೇಯ ಅವರಿಗೆ ಸಲ್ಲುತ್ತದೆ. ಬಡವರಿಗೆ ಮನೆ ಕಟ್ಟಲು ಸರ್ಕಾರದಿಂದ ನೆರವು ನೀಡುವ, ಕಡುಬಡವರಿಗೆ ವಾರದ ಭತ್ಯೆ ಒದಗಿಸುವ, ಹಸಿವಿನಿಂದ ಬಳಲುವ ಮಕ್ಕಳಿಗೆ ಶಾಲೆಗಳಲ್ಲಿ ಮಧ್ಯಾಹ್ನದ ಊಟ ನೀಡುವ ಯೋಜನೆಗಳನ್ನು ಆರಂಭಿಸಿದವರು ಜಸಿಂಡಾ. ನಗರ ಪ್ರದೇಶಗಳಿಗೆ ಆಗುತ್ತಿರುವ ವಲಸೆಯನ್ನು ತಡೆದು ಜನರಿಗೆ ಹಳ್ಳಿಗಳಲ್ಲೇ ಬದುಕಿನ ಮಾರ್ಗೋಪಾಯ ಒದಗಿಸಿಕೊಡಬೇಕು ಎನ್ನುವುದು ಅವರ ನಿಲುವು. ಸಲಿಂಗ ಮದುವೆಗೆ ಬೆಂಬಲವನ್ನೂ ನೀಡಿದ ಅವರು, ಪ್ರಧಾನಿಯಾಗಿ ಪ್ರೈಡ್ ಮಾರ್ಚ್‌ನಲ್ಲೂ (ಲೈಂಗಿಕ ಅಲ್ಪಸಂಖ್ಯಾತರು ನಡೆಸುವ ಮೆರವಣಿಗೆ) ಪಾಲ್ಗೊಂಡವರು. ‘ಗರ್ಭಪಾತ ಮಾಡಿಸಿಕೊಳ್ಳುವುದು ಅಪರಾಧ’ ಎಂಬ ಕಾಯ್ದೆಯನ್ನು ರದ್ದುಗೊಳಿಸುವಲ್ಲಿ ಮಹತ್ವದ ಪಾತ್ರ ವಹಿಸಿದವರೂ ಆಕೆ.

ಹವಾಮಾನ ವೈಪರೀತ್ಯವನ್ನು ತಡೆಗಟ್ಟಲು ನಡೆದಿರುವ ಜಾಗತಿಕ ಆಂದೋಲನದಲ್ಲಿ ಸಕ್ರಿಯವಾಗಿ ಪಾಲ್ಗೊಂಡ ಈ ನಾಯಕಿ, ನ್ಯೂಕ್ಲಿಯರ್ ಮುಕ್ತ ಜಗತ್ತಿಗಾಗಿ ನಡೆಸುವ ಹೋರಾಟಕ್ಕಿಂತ ಈ ವೈಪರೀತ್ಯದ ವಿರುದ್ಧ ಹೋರಾಡುವ ಅಗತ್ಯ ಹೆಚ್ಚಿದೆ ಎಂದು ಪ್ರತಿಪಾದಿಸಿದವರು. ಧರ್ಮದ ವಿಚಾರವಾಗಿಯೂ ಜಸಿಂಡಾ ಅವರ ನಿಲುವು ಗಮನ ಸೆಳೆಯುವಂಥದು. ‘ದಿ ಚರ್ಚ್ ಆಫ್ ಜೀಸಸ್ ಕ್ರೈಸ್ತ’ದಲ್ಲಿ ಬೆಳೆದ ಅವರು, ತಮ್ಮ 25ನೇ ವಯಸ್ಸಿನಲ್ಲಿ ಚರ್ಚ್‌ನಿಂದ ಹೊರಬಿದ್ದರು. ‘ಸಲಿಂಗಿಗಳ ವಿಚಾರವಾಗಿ ನನ್ನ ನಿಲುವುಗಳಿಗೂ ಚರ್ಚ್‌ನ ತತ್ವಗಳಿಗೂ ವೈರುಧ್ಯಗಳಿದ್ದವು. ಹೀಗಾಗಿ ಅಲ್ಲಿಂದ ಹೊರಬಂದೆ’ ಎಂದು, ಆಗ ಹೇಳಿದ್ದರು. ‘ಸಂಘಟಿತ ಧರ್ಮದೊಂದಿಗೆ ನಾನು ಇನ್ನುಮುಂದೆ ಯಾವತ್ತೂ ಗುರ್ತಿಸಿಕೊಳ್ಳುವುದಿಲ್ಲ’ ಎಂದು ಪ್ರಧಾನಿಯಾದ ಮೇಲೆ ಜಸಿಂಡಾ ಹೇಳಿದ್ದುಂಟು. ರಾಜಕೀಯದಲ್ಲಿ ಧರ್ಮ ಬೆರೆಸುವ ನಮ್ಮ ನಾಯಕರಿಗೆ ಆಕೆಯ ನಡೆಯೊಂದು ದೊಡ್ಡ ಪಾಠ.

ಮಾನವ ಹಕ್ಕುಗಳಿಗೆ ಅವರಷ್ಟು ಬೆಲೆ ನೀಡುವ ಪ್ರಧಾನಿ ಸಿಗುವುದು ಕಷ್ಟ. ಕ್ರೈಸ್ಟ್‌ಚರ್ಚ್‌ನ ಮಸೀದಿ ಮೇಲೆ ದಾಳಿ ನಡೆದಾಗ ಸಂತ್ರಸ್ತ ಮುಸ್ಲಿಮರ ಜತೆ ನಿಂತು ಅವರ ಕಣ್ಣೀರು ಒರೆಸಿದವರು ಈ ನಾಯಕಿ. ಕೋಮುದ್ವೇಷ ಹರಡದಂತೆ ಯಶಸ್ವಿಯಾಗಿ ತಡೆದವರೂ ಆಕೆ. ಭೂಕಂಪ ಇರಬಹುದು, ಭಯೋತ್ಪಾದಕರ ದಾಳಿ ಇರಬಹುದು, ಕೋವಿಡ್ ಸಂಕಷ್ಟವೇ ಆಗಿರಬಹುದು, ಅವರಷ್ಟು ವೇಗವಾಗಿ ಸ್ಪಂದಿಸುವ ಮತ್ತೊಬ್ಬ ಪ್ರಧಾನಿ ಜಗತ್ತಿನಲ್ಲಿಲ್ಲ ಎಂದು ಜಾಗತಿಕ ಮಾಧ್ಯಮಗಳು ಅವರನ್ನು ಹಾಡಿಹೊಗಳಿವೆ. ಆಡಳಿತಾತ್ಮಕವಾಗಿ ಏನೇ ಬೆಳವಣಿಗೆಗಳು ನಡೆದರೂ ಜನರಿಗೆ ವಿಷಯ ಮುಟ್ಟಿಸುವುದರಲ್ಲೂ ಅವರು ಮುಂದು. ತಕ್ಷಣ ಮಾಧ್ಯಮಗೋಷ್ಠಿ ಕರೆದು ವಿವರ ನೀಡುವುದು ಅವರ ವೈಖರಿ. ಸಾಮಾಜಿಕ ಜಾಲತಾಣಗಳಲ್ಲೂ ಎಲ್ಲ ಮಾಹಿತಿ ಹಂಚಿಕೊಳ್ಳಲು ಹಿಂದೆ ಬಿದ್ದವರಲ್ಲ. ತಮ್ಮ ಶಕ್ತಿ ಏನೆಂಬುದು ಅವರಿಗೆ ಚೆನ್ನಾಗಿ ಗೊತ್ತು. ದೌರ್ಬಲ್ಯಗಳನ್ನು ಹಿಂಜರಿಕೆಯಿಲ್ಲದೆ ಒಪ್ಪಿಕೊಳ್ಳುವ ಅವರ ಮನೋಭಾವ ಕೂಡ ಜನರ ಹೃದಯ ಗೆದ್ದಿದೆ. ಇಂತಹ ನಾಯಕತ್ವ ನಮಗೂ ಬೇಕು ಎಂದು ಬೇರೆ ದೇಶಗಳ ಪ್ರಜೆಗಳೂ ಬಯಸುವಂತೆ ಅವರ ವ್ಯಕ್ತಿತ್ವವಿದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65